**ಪಾಠ-12** **ಡಿಸೆಂಬರ್ 12-18**

# ಸಬ್ಬತ್: ದೇವರ ಚಾರಿತ್ರ್ಯವನ್ನು ಅನುಭವಿಸುವುದು ಮತ್ತು ಜೀವಿಸುವುದು



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ :** ಆ.ಕಾ. 1,2: ವಿ.ಕಾ 16:14–29; ಯೆಶಾಯ 58:1–14; ಮತ್ತಾಯ 12:1–13; ಲೂಕ 13:10–17.

**ಸ್ಮರಣವಾಕ್ಯ : "ಮತ್ತು ಆತನು– ಸಬ್ಬತ್‌ದಿನವು ಮನುಷ್ಯರಿಗೋಸ್ಕರ ಉಂಟಾಯಿತೇ ಹೊರತು ಮನುಷ್ಯರು ಸಬ್ಬತ್ ದಿನಕ್ಕೋಸ್ಕರ ಉಂಟಾಗಲಿಲ್ಲ; ಹೀಗಿರಲಾಗಿ ಮನುಷ್ಯಕುಮಾರನು ಸಬ್ಬತ್ ದಿನಕ್ಕೂ ಒಡೆಯನಾಗಿದ್ದಾನೆ ಅಂದನು"** (ಮಾರ್ಕ 2:27,28).

ಜ್ಯೂಡಿ ತನ ಪದವಿ ಕಾಲೇಜಿನಲ್ಲಿ ಒಬ್ಬಳೇ ಸೆವೆಂತ್ ಡೇ ಅಡ್ವೆಂಟಿಸ್ಟ್ ವಿದ್ಯಾರ್ಥಿನಿಯಾಗಿದ್ದಳು. ಸಬ್ಬತ್ ದಿನ ತಾನು ಯಾವುದೇ ಸಾಮಾಜಿಕ ಕಾರ್ಯಕ್ರಮದಲ್ಲಿ ಭಾಗವಹಿಸುವುದಿಲ್ಲ ಎಂಬ ಆಕೆಯ ಆಯ್ಕೆ, ಅವಳ ನಂಬಿಕೆ, ಎಲ್ಲರಿಗೂ ಎದ್ದುಕಾಣುವಂತೆ ಮಾಡಿತ್ತು.

ಒಂದು ದಿನ ಆಕೆಯ ಗೆಳತಿಯರಲ್ಲಿ ಒಬ್ಬಳಾಗಿದ್ದ, ಗಾಯ್ಲೆ, ದೂರವಾಣಿ ಕರೆ ಮಾಡಿದ್ದಳು. ಗಾಯ್ಲೆಯ ಗಂಡ ಆರುವಾರ ಹೊರ ಊರಿಗೆ ಹೋಗಲಿಕ್ಕಿದ್ದನು. ಜ್ಯೋತಿ, ಶುಕ್ರವಾರ ರಾತ್ರಿ "ಏನು ಮಾಡುವುದಿಲ್ಲ" ಎಂದು ತಿಳಿದಿದ್ದ ಗಾಯ್ಲೆ, ಆಕೆಯನ್ನು ತನ್ನೊಂದಿಗೆ ಕಾಲ ಕಳೆಯಲು ಆಹ್ವಾನ ನೀಡಿದ್ದಳು.

* ಡಿಸೆಂಬರ್ 19ರ ಸಬ್ಬತ್ ಶಾಲೆಗೆ ಸಿದ್ಧರಾಗಲು ಈ ವಾರದ ಪಾಠವನ್ನು ಓದಿಕೊಳ್ಳಿರಿ.

ಮುಂದಿನ ನಾಲ್ಕು ಶುಕ್ರವಾರ ಜೊತೆಯಾಗಿ ಊಟಮಾಡಿದರು, ಸಂಗೀತ ಕೇಳಿದರು, ತಮ್ಮ ಕ್ರೈಸ್ತೀಯ ಅನುಭವಗಳನ್ನು ಹಂಚಿಕೊಂಡರು. ತಮ್ಮ ಸ್ನೇಹ ಸಂಜೆಯನ್ನು ಆನಂದದಿಂದ ಕಳೆದಿದ್ದರು. ಐದನೇ ಶುಕ್ರವಾರ ಸಂಜೆ ಅಂಗಡಿಗೆ ಹೋಗಿ, ಮನೆಗೆ ವಾಪಾಸ್ ಬಂದಿದ್ದ ಗಾಯ್ಲೆ, ತನ್ನ ಗಡಿಯಾರ ನೋಡಿಕೊಂಡು ಹೇಳಿದಳು– "ಬೇಗ ಬಂದೆ, ಒಳ್ಳೆದಾಯಿತು. ಇನ್ನೇನು ಸಬ್ಬತ್ ಆರಂಭವಾಗಲಿಕ್ಕಿದೆ ಎಂದಿದ್ದಳು". ಕಳೆದ ನಾಲ್ಕು ಶುಕ್ರವಾರದ, ಜ್ಯೂಡಿಯೊಂದಿಗಿನ ಒಡನಾಟದಿಂದ ತನ್ನ ಕ್ರೈಸ್ತೀಯ ಅನುಭವದಲ್ಲಿ ಹೊಸ ಸತ್ಯಗಳನ್ನು ಕಂಡುಕೊಂಡಿದ್ದಳು. ಆಕೆ ತನ್ನ ಕೈಸ್ತೀಯ ಅನುಭವದಲ್ಲಿ ಬೆಳೆಯತೊಡಗಿದ್ದಳು. ದೇವರನ್ನು ಕುರಿತು ಹೆಚ್ಚು ಹೆಚ್ಚು ಕಲಿಯತೊಡಗಿದ್ದಳು. ಆಕೆಯ ನಂಬಿಕೆ ಆಳವಾಗಿ ಬೇರು ಬಿಡತೊಡಗಿತ್ತು. ಸಬ್ಬತ್ತು, ಶಿಕ್ಷಣ ಪಡೆಯುವುದಕ್ಕೂ ಮತ್ತು ವೈಯಕ್ತಿಕ ಕ್ರೈಸ್ತೀಯ ಬೆಳವಣಿಗೆಗೂ ಒಂದು ಸದಾವಕಾಶವೇ ಸರಿ.

**ಸಬ್ಬತ್ತು ಒಂದು ವಿಶ್ರಾಂತಿ ಪಡೆಯುವ ದಿನ ಮಾತ್ರವಲ್ಲ, ಶಿಕ್ಷಣ ಪಡೆಯುವ ದಿನವೆಂದು ಚಿಂತನೆ ನಡೆಸುವುದೇ ಒಂದು ಆಸಕ್ತಿಕರ ಕಥೆಯಾಗಿರುತ್ತದೆ.**

**ಭಾನುವಾರ** **ಡಿಸೆಂಬರ್ 13**

## ವಿಸ್ಮಯಗೊಳ್ಳುವ ಸಮಯ

ಆದಿಕಾಂಡದ ಮೊದಲೆರಡು ಅಧ್ಯಾಯಗಳಲ್ಲಿ ದೇವರು, ಎರಡು ಸಮರಸ ಸೃಷ್ಟಿಯ ವರ್ಣನೆಗಳನ್ನು ಕೊಡಲು ಆಯ್ಕೆ ಮಾಡಿದ್ದು ಏಕೆ ಎಂದು ಯಾವಾಗಲೂ ಆಶ್ಚರ್ಯಪಟ್ಟಿದ್ದೀರಾ? ಆದಿಕಾಂಡ 1ನೇ ಅಧ್ಯಾಯ ಸೃಷ್ಟಿಯ ವಾರದ ವಿವರ ಮತ್ತು ದಿನನಿತ್ಯ ಸೃಷ್ಟಿ ಬೆಳೆಯುತ್ತ ಹೋಗಿ, ಕೊನೆಗೆ ಜೀವರಾಶಿಗಳ ಉದ್ಭವವಾಗಿ, ಸೃಷ್ಟಿಯ ಉತ್ತುಂಗದಲ್ಲಿ ಆರನೇ ದಿನ ಆದಾಮ ಮತ್ತು ಹವ್ವಳ ಸೃಷ್ಟಿಯಾಗಿತ್ತು. ಆದಿಕಾಂಡ 2ನೇ ಅಧ್ಯಾಯದಲ್ಲಿ ಅದೇ ಸೃಷ್ಟಿಯ ವಿವರವಿದೆ. ಆದರೆ ನೋಡುವ ದೃಷ್ಟಿಕೋನ ವಿಭಿನ್ನ. ಆರನೇ ದಿನಕ್ಕೆ ವಿಶೇಷ ಒತ್ತುಕೊಡಲಾಗಿದೆ. ಅದರ ಕೇಂದ್ರ ಬಿಂದು; ಆದಾಮ ಮತ್ತು ಹವ್ವಳಿಗೆ ಬೇಕಾಗಿದ್ದೆಲ್ಲ ಅಲ್ಲಿತ್ತು: ಸುಂದರವಾದ ತೋಟ, ಹರಿಯುವ ನದಿ, ಮತ್ತು ಸುತ್ತ ಓಡಾಡುವ ಪ್ರಾಣಿಜನ್ಯ.

ಸೃಷ್ಟಿ ಬಹಳ ವಿಸ್ತಾರವಾದದ್ದು. ಒಂದು ವರ್ಣನೆಗೆ ನಿಲುಕದು.

ಮೊದಲನೆಯದಾಗಿ, ನಾವು ಪರಾಕ್ರಮಶಾಲಿಯಾದ, ಪರಿಪೂರ್ಣ ಸೌಂದರ್ಯದ ಕಲಾಪ್ರೇಮಿಯಾದ ಸೃಷ್ಟಿಕರ್ತನನ್ನು ಕುರಿತು ಕಲಿಯುತ್ತೇವೆ. ನಂತರ ಸಂಬಂಧಗಳ ಹುಟ್ಟುಹಾಕುವ ದೇವರನ್ನು ನೋಡುತ್ತೇವೆ. ಮಾನವರು ಒಬ್ಬರನ್ನೊಬ್ಬರು ಪ್ರೀತಿ ಮಾಡಬೇಕು, ಒಬ್ಬರ ಹಿತವನ್ನು ಇನ್ನೊಬ್ಬರು ಬಯಸಬೇಕು ಮತ್ತು ಇನ್ನುಳಿದ ಸೃಷ್ಟಿಯನ್ನೆಲ್ಲ ಪ್ರೀತಿಯಿಂದ ನೋಡಿಕೊಳ್ಳಬೇಕು ಎಂಬುದೇ ಆತನ ಆಶಯ.

**ಆದಿಕಾಂಡ 1 ಮತ್ತು 2ನೇ ಅಧ್ಯಾಯವನ್ನು ಓದಿಕೊಳ್ಳಿರಿ. ಮೊದಲನೇ ಸಬ್ಬತ್ತು, ಮೊದಲನೇ ಸೃಷ್ಟಿಯೊಂದಿಗೆ ಬೆಸೆದುಕೊಂಡಿರುವುದು ಹೇಗೆ ಮತ್ತು ಮುಂದುವರಿದು ಎರಡನೇ ಸೃಷ್ಟಿಯ ವಿವರಣೆಗೆ ಮುಂದುವರಿದದ್ದು ಹೇಗೆ ಎಂಬುದನ್ನು ಕುರಿತು ಚಿಂತನೆ ಸೃಷ್ಟಿಯ ವಿವರಣೆಗೆ ಮುಂದುವರಿದದ್ದು ಹೇಗೆ ಎಂಬುದನ್ನು ಕುರಿತು ಚಿಂತನೆ ನಡೆಸಿರಿ. ಈ ಚಿಂತನೆಯ ತೀರ್ಪು, ದೇವರ, ಸಬ್ಬತ್ತನ್ನು ಆಶೀರ್ವದಿಸುವುದು ಮತ್ತು ಅದನ್ನು ಪವಿತ್ರ ಮಾಡುವುದು ಎಂದರೇನು ಎಂಬುದನ್ನು ಅರ್ಥಮಾಡಿಕೊಳ್ಳಲು ಹೇಗೆ ಸಹಾಯ ಮಾಡಿದೆ?**

---

---

ಮೊದಲನೇ ಸಬ್ಬತ್ತಿನಲ್ಲಿ ನೀವೇ ಆದಾಮ ಮತ್ತು ಹವ್ವಳು ಆಗಿದ್ದೀರಿ ಎಂದು ಊಹಿಸಿಕೊಳ್ಳಿರಿ. ಜೀವಂತವಾಗಿ ಎದ್ದು ಬಂದ ದಿನ. ನಿಮ್ಮ ಬಾಳ ಸಂಗಾತಿಯೊಂದಿಗಿರುವ ಮೊದಲ ದಿನ. ದೇವರೊಂದಿಗಿನ ಪ್ರಥಮ ದಿನ. ಶಿಕ್ಷಣ ಪಡೆಯಲು ಎಂತಹ ದಿನವಾಗಿತ್ತಲ್ಲವೇ! ಅಂತಹ ಸುಂದರವಾದ ಸೃಷ್ಟಿಯ ಕರ್ತೃವಾದ ದೇವರನ್ನು ಕುರಿತು ಕಲಿಯಲು ಆರಂಭಿಸಿದಿರಿ. ದೊಡ್ಡಗಾತ್ರದ ಆನೆ ಮತ್ತು ಸಣ್ಣಗಾತ್ರದ ಕಪ್ಪೆ ಎರಡೂ ಒಂದೇ ತೆರನಾದ ಪ್ರಾಣಿಗಳೇ ಎಂಬುದನ್ನು ಕಂಡು ಕೌತುಕ ಪಡುವಿರಿ. ಕುಣಿಯುವ ಜಿಂಕೆ ಮತ್ತು ನಲಿಯುವ ನವಿಲು ನೋಡಿ ಸಂತೋಷಪಡುತ್ತೀರಿ. ವೈವಿಧ್ಯಮಯ ವರ್ಣಗಳು ಮತ್ತು ಆಕಾಶಗಳು ಮತ್ತು ಶಬ್ದದ ಕಲರವಗಳು ನಿಮ್ಮ ಮನಸ್ಸನ್ನು ತಮ್ಮ ಸೌಂದರ್ಯಮಯ ಬಲೆಯಲ್ಲಿ ಸಿಲುಕಿಸಿಕೊಂಡುಬಿಡುತ್ತವೆ. ರುಚಿ ಮತ್ತು ವಾಸನೆ ಮತ್ತು ವಿವಿಧ ರಚನೆಯ ಪರಿಶೋಧನೆ ಹರ್ಷ ನೀಡಿತು. ಎಲ್ಲಕ್ಕಿಂತ ಮಿಗಿಲಾಗಿ ಅಲ್ಲಿ ನೀವು ಸಂಬಂಧಗಳನು ಕುರಿತು ಕಲಿಯತೊಡಗುತ್ತೀರಿ: ಜವಾಬ್ದಾರಿ, ಪಾಲನೆ, ಪ್ರೀತಿ

ಇತ್ಯಾದಿ ಸಂಬಂಧಗಳು ಇದೆಲ್ಲವನ್ನೂ ನಿಮ್ಮ ಸೃಷ್ಟಿಕರ್ತನೊಂದಿಗೆ ನೀವು ಅನುಭವಿಸುತ್ತೀರಿ; ಇನ್ನುಳಿದ ಸೃಷ್ಟಿಯೊಂದಿಗೆ ಅಭ್ಯಾಸ ಮಾಡುತ್ತೀರಿ.

ಆದಾಮ ಮತ್ತು ಹವ್ವಳಿಗೆ ಮೊದಲನೇ ಸಬ್ಬತ್ತು ಜಡ ಅಥವಾ ನಿಷ್ಕ್ರಿಯವಾಗಿತ್ತು ಎನ್ನುವುದಕ್ಕೆ ಕಾರಣವೇ ಇಲ್ಲ. ಇದು ತಮ್ಮ ಸೃಷ್ಟಿಕರ್ತ ಹಾಗು ಆತನಿಂದ ಉಂಟಾದ ಸೃಷ್ಟಿಯಲ್ಲಿ ಮನಸ್ಸನ್ನು ಕೇಂದ್ರೀಕರಿಸಲು ದೇವರೇ ಸೃಷ್ಟಿಸಿಕೊಟ್ಟ ಸದಾವಕಾಶವಿದು. ಇದು ಅವರು ವಿಸ್ಮಯಗೊಳ್ಳುವ ಸಮಯವಾಗಿತ್ತು.

**ಮೊದಲನೇ ಸಬ್ಬತ್ತಿನಲ್ಲಿ ಆದಾಮ–ಹವ್ವಳಿಗೆ ಇದ್ದ ವಿವಿಧ ಶೈಕ್ಷಣಿಕ ಸದಾವಕಾಶಗಳನ್ನು ಪಟ್ಟಿಮಾಡಿರಿ. ಇಂದಿನ ಸೃಷ್ಟಿ ಅಂದಿನಂತಿರದಿದ್ದರೂ, ಯಾವ ಯಾವ ಸದಾವಕಾಶಗಳು ಇಂದು ಸಮಂಜಸವಾಗಿವೆ? ಅವು ನಿಮ್ಮ ಸಬ್ಬತ್ತುಗಳನ್ನು ಸಮೃದ್ಧಗೊಳಿಸುವುದು ಹೇಗೆ?**

---

---

**ಸೋಮವಾರ** **ಡಿಸೆಂಬರ್ 14**

## ಮರಶೋಧನೆಯ ಸಮಯ

ಮೋಶೆಯನ್ನು, ಐಗುಪ್ತದಿಂದ ಇಸ್ರಾಯೇಲ್ಯರನ್ನು ಹೊರಕ್ಕೆ ನಡೆಯಿಸಿಕೊಂಡು ಹೋಗುವಂತೆ ಹೇಳಲಾಯಿತು. ಆದರೆ ಆ ಜನರಿಗೋ ತಾವು ದೇವರ ಮಕ್ಕಳೆಂಬ ದೃಷ್ಟಿಕೋನವೇ ಕಳೆದುಹೋಗಿತ್ತು. ತನ್ನನ್ನು ಆರಾಧನೆಮಾಡಿ ಎಂದು ಹೇಳುವ ಮತ್ತು ಭವ್ಯ ಭವಿಷ್ಯಕ್ಕೆ ಅನೇಕ ವಾಗ್ದಾನ ಮಾಡುತ್ತಿರುವ ಈ ದೇವರು ಯಾರೆಂದು ತಿಳಿಸಲು ಅವರು ಮರುಶೋಧನೆ ನಡೆಸಬೇಕಿತ್ತು. ಈ ಮರುಶೋಧದ ಪ್ರಯಾಣದಲ್ಲಿ ಸಬ್ಬತ್ತು ಅವರಿಗೆ ಸಂಕ್ಷಿಪ್ತ ಕಲಿಕೆಯ ಅನುಭವವಾಗಲಿದೆ. ದೇವರಿಗೂ ಮತ್ತು ದೇಶಕ್ಕೂ ನಡುವಿರುವ ವಿಶೇಷ ಸಂಬಂಧವನ್ನು ತನ್ನ ಸುತ್ತಮುತ್ತಲಿನ ದೇಶಗಳಿಗೆ ಸೂಚನೆ ಕೊಡುವ ಸಮಯವೂ ಇದಾಗಿತ್ತು. ಇಸ್ರಾಯೇಲ್ಯರಿಗೆ ಶಿಕ್ಷಣ ಕೊಡುತ್ತಿದ್ದ ಪ್ರಕ್ರಿಯೆಯಲ್ಲಿ "ಮನ್ನಾ" ಎಂಬ ಆಹಾರ ನೀಡಿದ ಅನುಭವವನ್ನು ಸಹ ಸಂಕ್ಷಿಪ್ತವಾಗಿ ತಿಳಿಸಿಕೊಡಲಾಯಿತು.

**ವಿ.ಕಾ. 16:14–29ರಲ್ಲಿ ಇಸ್ರಾಯೇಲ್ಯರು ಕಲಿಯಬಹುದಾದ ಪಾಠಗಳಾವುವು?**

ದೇವರು, ಇಸ್ರಾಯೇಲ್ಯರಿಗೆ, ಅದ್ಭುತವಾಗಿ ಪರಲೋಕದ ಆಹಾರ ಮನ್ನಾವನ್ನು ಒದಗಿಸುತ್ತಾನೆ. ಆವತ್ತಿಗೆ ಎಷ್ಟು ಸಾಕೋ ಅಷ್ಟೇ ಆಹಾರ ಕೊಡುತ್ತಾನೆ. ಅಳತೆ ಮೀರಿ ಕೊಟ್ಟಿದ್ದರೆ, ಅವರು ಕೊಟ್ಟಾತನನ್ನೇ ಮರೆಯುವ ಸಾಧ್ಯತೆಯಿತ್ತು. ಹೀಗಾಗಿ, ಪ್ರತಿದಿನ ಆತ ಅವರಿಗಾಗಿ ಅದ್ಭುತಕಾರ್ಯ ನಡೆಸಿದ್ದನು. ಆತನು ಅವರನ್ನು ಪ್ರತಿದಿನ ಪಾಲಿಸುತ್ತಿರುವುದನ್ನು ಅವರು ಕಂಡಿದ್ದರು. ಆದರೆ ಸಬ್ಬತ್ ದಿನ ಪರಿಸ್ಥಿತಿ ಭಿನ್ನವಾಗಿತ್ತು. ಬೇರೆ ದಿನಗಳಿಗಿಂತ, ಸಬ್ಬತ್ ದಿನ ವಿಶೇಷವಾದ ದಿನ ಎಂಬುದನ್ನು ಎತ್ತಿಹಿಡಿಯಲಾಗಿತ್ತು.

ಅಲ್ಲಿ ಎರಡು ಅದ್ಭುತಗಳನ್ನು ನಡೆಸಲಾಗಿತ್ತು: ಶುಕ್ರವಾರ, ಉಳಿದ ದಿನಗಳಿಗಿಂತ ಎರಡು ಪ್ರಮಾಣದಷ್ಟು ಆಹಾರ ನೀಡಲಾಗಿತ್ತು. ಮರುದಿನ ಉಣ್ಣುವುದಕ್ಕಾಗಿ ರಾತ್ರಿಯೆಲ್ಲ ಮನೆಯಲ್ಲಿಟ್ಟ ಮನ್ನಾ ಕೊಳೆಯಲಿಲ್ಲ; ನಾತ ಬರಲಿಲ್ಲ; ಹುಳ ಬೀಳಲಿಲ್ಲ. ಸಬ್ಬತ್ತಿನ ದಿನದಂದು ಜನ ದೇವರು ನಡೆಸುತ್ತಿದ್ದ ಈ ಅದ್ಭುತವನ್ನು ಕಂಡು ಆಶ್ಚರ್ಯಪಡುತ್ತಿದ್ದರು. ಹೀಗಾಗಿ ಅವರು ತಮ್ಮನ್ನು ವಿಮೋಚನೆಗೊಳಿಸಿ, ತಮ್ಮನ್ನು ಅದ್ಭುತವಾಗಿ ಕೈಹಿಡಿದು ನಡೆಸುತ್ತಿರುವ ಈ ದೇವರು ಯಾರೆಂದು ಮರುಶೋಧನೆ ಮಾಡಿ ಕಂಡುಕೊಳ್ಳಬೇಕಿತ್ತು. ದೇವರ ಜನರು ಅಂದರೆ ಯಾರು ಎಂಬ ಬಗ್ಗೆಯೂ ಅವರು ಮರುಶೋಧನೆ ಮಾಡಬೇಕಿತ್ತು.

ಇಸ್ರಾಯೇಲ್ಯರು 40 ವರುಷಗಳ ಕಾಲ ಮನ್ನಾ ತಿಂದರು (ವಿ.ಕಾ. 16:35). ಅರಣ್ಯದಲ್ಲಿ ಯಾವ ರೀತಿಯಾಗಿ ಅವರಿಗೆ ಉಣಬಡಿಸಿದನು ಎಂಬುದನ್ನು ನೆನಸಿಕೊಳ್ಳುವುದಕ್ಕೋಸ್ಕರ ಒಂದು ಗೋಮೆರ್ ಮನ್ನವನ್ನು ಇಟ್ಟುಕೊಳ್ಳಬೇಕು ಎಂದು ಹೇಳಿದನು. ಆರೋನ್ ಮನ್ನಾವನ್ನು ಆಜ್ಞಾಶಾಸನ ಮಂಜೂಷದ ಮುಂದೆ ಅದನ್ನು ಇಟ್ಟನು (ವಿ.ಕಾ.16:32–34). ಅದು ಸಬ್ಬತ್ತನ್ನು ನೆನೆಸುವ ಅನುಭವವೂ ಆಗಿತ್ತು.

ಇನ್ನೂ ಅನೇಕ ಸಂದರ್ಭಗಳಲ್ಲಿ ಇಸ್ರಾಯೇಲ್ಯರಿಗೆ ಸಬ್ಬತ್ತು ವಿಶೇಷ ಎಂಬುದನ್ನು ಸ್ಪಷ್ಟವಾಗಿ ದೇವರು ತೋರಿಸಿಕೊಟ್ಟಿದ್ದನು.

ಇಸ್ರಾಯೇಲ್ಯರು ತಾವ್ಯಾರು ಮತ್ತು ತಮ್ಮ ದೇವರು ಯಾರು ಎಂಬುದನ್ನು ಮರುಶೋಧನೆ ಮಾಡಿ ತಿಳಿದುಕೊಳ್ಳುವುದಕ್ಕಾಗಿ ದೇವರು ಸಬ್ಬತ್ತನ್ನು ಒಂದು ಮಾರ್ಗವಾಗಿ ಕೊಟ್ಟಿದ್ದನು. ತಮ್ಮ ಸೃಷ್ಟಿಕರ್ತನಾದ ದೇವರಚಾರಿತ್ರ್ಯವನ್ನು ಆಳವಾಗಿ ಅರ್ಥಮಾಡಿಕೊಳ್ಳಲು ಮತ್ತು ದೇವರಿಂದ ವಾಗ್ದಾನ ಮಾಡಲ್ಪಟ್ಟ ಶಾಶ್ವತ ಸಂಬಂಧವನ್ನು ಬೆಳೆಯಿಸಿಕೊಳ್ಳಲು ಸಬ್ಬತ್ತನ್ನು ಒಂದು ಸನ್ನಿವೇಶವಾಗಿ ಮಾಡಿ, ಆ ದಿನವನ್ನು ಪವಿತ್ರವಾಗಿ ಕಂಡು, ವಿಧೇಯರಾಗಿ ನಡೆದುಕೊಳ್ಳುವಂತೆ ಅವರಿಗೆ ಆದೇಶಸಿಸಲಾಗಿತ್ತು.

**ನೀವೊಬ್ಬ ಕಿಶೋರ/ ಕಿಶೋರಿ (ಟೀನ್ ಏಜರ್) ಹತ್ತಿರ ಮಾತನಾಡುತ್ತಿದ್ದೀರಿ. ಅವರು ಸಬ್ಬತ್ "ಬೋರಿಂಗ್" ಎನ್ನುತ್ತಾರೆ. ಸತ್ಯವೇದ ಸಬ್ಬತ್ತಿನ ಆಚರಣೆ ಕುರಿತು ಹೇಳುವುದರಿಂದ ಮತ್ತು ತಂದೆತಾಯಿಗಳು ಆಚರಣೆ ಮಾಡುವಂತೆ ಹೇಳುವುದರಿಂದ ತಾವು ಸಬ್ಬತ್ತಿನ ಆಚರಣೆ ಕೈಗೊಳ್ಳುವುದಾಗಿ ಹೇಳುತ್ತಾರೆ. ಸಬ್ಬತ್ ಒಂದು ಧನಾತ್ಮಕ ಕಲಿಕೆಯ ಅನುಭವ, ಅದನ್ನು ಮತ್ತೆ ಮರುಶೋಧನೆ ಮಾಡಿಕೊಳ್ಳಲು ನೀವು ಕೊಡುವ ಸಲಹೆಗಳಾವುವು?**

---

---

**ಮಂಗಳವಾರ** **ಡಿಸೆಂಬರ್ 15**

## ಕಲಿಕೆಯ ಪ್ರಾಶಸ್ತ್ಯಗಳಿಗೆ ಸಮಯ

ದೇವರೊಂದಿಗಿನ ಇಸ್ರಾಯೇಲ್ಯರ ಅನುಭವಗಳ ಏರಿಳಿತ, ಅವರು ಸಬ್ಬತ್ತನ್ನು ಹೇಗೆ ಕೈಗೊಂಡಿದ್ದರು ಎಂಬುದಕ್ಕೆ ಜಂಟಿಹಾಕಿಕೊಂಡಿದೆ. ಸಬ್ಬತ್ತನ್ನು ಗೌರವದಿಂದ ಕಾಣಲು ಅವರ ಮನಸೊಪ್ಪದಿರುವುದನ್ನು ಮನಗಂಡ ದೇವರು, ಅವರ ಜೀವನದಲ್ಲಿ ಆತನೊಂದಿಗಿನ ಅಸಂಬದ್ಧ ಸೂಚನೆಯನ್ನೂ ಕಂಡಿದ್ದರು (ಯೆರೆ 17:19–27). ಸಬ್ಬತ್ತಿಗಾಗಿ ಮಾಡಿದ ಹೊಸ ವಚನಬದ್ಧತೆ ಸಹ ಸಬ್ಬತ್ತಿನ ಪುನಃಸ್ಥಾಪನೆಯ ಒಂದು ಭಾಗವಾಗಿತ್ತು. ಯಾವುದಕ್ಕೆ ಪ್ರಾಶಸ್ತ್ಯ ಕೊಡಲಾಯಿತೋ ಅದು ನ್ಯಾಯಯುತವಾದದ್ದೇ ಆಗಿತ್ತು. ಯೆಶಾಯ 58 ಒಂದು ಆಸಕ್ತಿಕರವಾದ ವಿಭಿನ್ನ ಚಿತ್ತವನ್ನು ನಮ್ಮ ಮುಂದಿಡುತ್ತದೆ.

**ಯೆಶಾಯ 58:1–14ನ್ನು ಓದಿಕೊಳ್ಳಿರಿ. ನಮಗೆ ಇಂದು ಸಮಂಜಸವಾಗಿರುವುದನ್ನು ದೇವರು, ಅಂದು ತನ್ನ ಜನಗಳಿಗೆ ತಿಳಿಸಿಕೊಟ್ಟದ್ದೇನು?**

________________________________________

________________________________________

ತಮ್ಮ ಆರಾಧನೆಯಲ್ಲಿ, ತಮ್ಮ ಉಪವಾಸ ಪ್ರಾರ್ಥನೆಯಲ್ಲಿ, ಇಸ್ರಾಯೇಲ್ಯರು ದೇವರು ಹಿಂಬಾಲಕರಂತೆ ಪ್ರತಿಪಾದಿಸುತ್ತಾರೆ. ಆರಾಧನೆ ಮತ್ತು ಉಪವಾಸ ಪ್ರಾರ್ಥನೆಯ ನಂತರ ಅವರು ನಡೆಸುವ ಜೀವನದಲ್ಲಿ, ಸತ್ಯಸಂಧತೆ ಕಂಡುಬರುವುದಿಲ್ಲ. ದೇವರ ಧರ್ಮಶಾಸ್ತ್ರಕ್ಕೆ ಪ್ರಾಮಾಣಿಕ ಹೃತ್ಪೂರ್ವಕದ ಒಪ್ಪಿಸಿಕೊಡುವಿಕೆ ಕಂಡುಬರುವುದಿಲ್ಲ.

ಯೆಶಾಯ 58ನೇ ಅಧ್ಯಾಯದಲ್ಲಿ ದೇವರು ತನ್ನ ಜನರಿಂದ ನಿರೀಕ್ಷಿಸುವುದೇನು ಎಂಬುದನ್ನು ಕಂಡುಕೊಳ್ಳುವುದಕ್ಕೆ ಬೇಕಾದ ಸಲಹೆಗಳನ್ನು ಅವನು ಮುಂದುವರಿದು ಬರೆದಿರುತ್ತಾನೆ.

ಇದೇ ಎಲ್ಲವೂ ಅಲ್ಲ. ಯೆಶಾಯ 58:13,14ನ್ನೂ ಓದಿಕೊಳ್ಳಿರಿ. ಈ ಅಧ್ಯಾಯದ ಕೊನೆಯಲ್ಲಿ ದೇವರು, ಸಬ್ಬತ್ತನ್ನು ಕೇಂದ್ರಬಿಂದು ಮಾಡಿರುವುದೇಕೆ? ಪ್ರವಾದಿಯು, ಈ ಪ್ರವಾದನೆಯ ಪುಸ್ತಕದ ಇತರೇ ಅಧ್ಯಾಯಗಳಲ್ಲಿರುವ ವೇದಭಾಗವನ್ನೇ ಬಳಸಿಕೊಂಡಿರುವುದೇಕೆ? "ಸ್ವೇಚ್ಛೆಯಾಗಿ ನಡೆಯದೆ" "ಸ್ವ ಕಾರ್ಯದಲ್ಲಿ ನಿರತರಾಗದೆ" "ಹರಟೆ ಹರಟದೆ" ಎಂದು ಪ್ರವಾದಿ ಎಚ್ಚರಿಕೆ ನೀಡಿದ್ದಾನೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಮಾಮೂಲು ದಿನಚಾರಿಯ ದಿನದಂತೆ ಸಬ್ಬತ್ತಿನ ದಿನದಂದು ನಡೆದುಕ್ಕೊಳ್ಳಲಾಗದು. ನಿಮ್ಮ ಸ್ವಂತ ಆಲೋಚನೆಯಂತೆ ನಡೆದುಕೊಳ್ಳುವುದ ಮತ್ತು ಆರಾಧನೆಗೆ ಯೋಗ್ಯನಾದವನೊಂದಿಗೆ ಅಸಂಬದ್ಧವಾಗಿ ನಡೆದುಕೊಳ್ಳುವುದು ಯೋಗ್ಯವಾದ ಸಬ್ಬತ್ತಿನ ಆಚರಣೆಯ ಕ್ರಮವಲ್ಲ. ಸಬ್ಬತ್ತು "ಸಂತೋಷಮಯವಾದದ್ದು", ದೇವರನ್ನು "ಗೌರವಿಸುವಂತದ್ದು". ಉಳಿದ ಅಧ್ಯಾಯಗಳ ಸನ್ನಿವೇಶಗಳನ್ನೂ ಪರಿಗಣನೆಗೆ ತೆಗೆದುಕೊಂಡು ಹೇಳುವುದಾದರೆ, ಸಬ್ಬತ್ತು, ದೇವರ ಉದ್ದೇಶವನ್ನೂ ಮತ್ತು ಆತನ ಚಾರಿತ್ರ್ಯವನ್ನೂ ಕಲಿಯುವುದರಲ್ಲಿ ಸಂತೋಷಪಡುವ ಸಮಯವಾಗಿದೆ. ನಂತರಲ್ಲಿ, ಈ ಉದ್ದೇಶ ಮತ್ತು ಚಾರಿತ್ರ್ಯಗಳನ್ನು ಇತರರೊಂದಿಗೆ ಇರುವ ಸಂಬಂಧದೊಂದಿಗೆ ಜೀವಿಸುವುದು.

ಸಬ್ಬತ್ತನ್ನು ಹೇಗೆ ಆಚರಣೆಯಲ್ಲಿ ತರಬೇಕು ಮತ್ತು ಆರಾಧನೆ ಮಾಡಬೇಕು ಎಂದು ತಿಳಿದುಕೊಂಡರೆ ಮಾತ್ರ ಸಾಲದು. ಕಲಿಯುವಿಕೆ ಜೀವನದ ಮೇಲೆ ಅಪಾರವಾದ ಪರಿಣಾಮ ಬೀರಬೇಕು. ಸಬ್ಬತ್ತು, ಕಲಿಯುವುದಕ್ಕೆ ಮತ್ತು ಪ್ರಾಶಸ್ತ್ಯವಾದವುಗಳಾಗಿ ಬದುಕುವುದಕ್ಕೆ ಇರುವ ಸಮಯವಾಗಿದೆ.

**ಸಬ್ಬತ್ತು ನಿಮಗೆ ಸಂತೋಷ ಕೊಡುತ್ತಿದೆಯೇ? ಸಂತೋಷ ಕೊಡದಿದ್ದರೆ, ಕೊಡುವ ಹಾಗೆ ಯಾವ ಬದಲಾವಣೆ ಮಾಡಿಕೊಳ್ಳುವಿರಿ? ಸಬ್ಬತ್ತನ್ನು "ಗೌರವ" ದಿಂದ ಕಾಣುವುದನ್ನು ಕಲಿತಿದ್ದೀರಾ? ಈ ವಿಷಯವನ್ನು ಕುರಿತು ನಿಮ್ಮ ಸಬ್ಬತ್ ಶಾಲೆಯ ತರಗತಿಯಲ್ಲಿ ಚರ್ಚಿಸಿರಿ. ಆದಷ್ಟು ಪ್ರಾಮಾಣಿಕವಾಗಿರಲಿ ನಿಮ್ಮ ಉತ್ತರ.**

**ಬುಧವಾರ** **ಡಿಸೆಂಬರ್ 16**

## ಸಮತೋಲನ ಕಂಡುಕೊಳ್ಳುವ ಸಮಯ

ಯೇಸು ದೇವರಾಜ್ಞೆಯನ್ನು ಗೌರವಿಸಿದನು ಮತ್ತು ಸಮರ್ಥಿಸಿದ್ದನು (ಮತ್ತಾ 5:17,18). ದೇವರಾಜ್ಞೆಗ್ಗಳಿಗೆ ಅಂದಿನ ಧಾರ್ಮಿಕ ನಾಯಕರುಗಳು ನೀಡುತ್ತಿದ್ದ ಅರ್ಥವಿವರಣೆಯನ್ನು ಯೇಸು ಆಕ್ಷೇಪಿಸುತ್ತಿದ್ದನು. ಸಬ್ಬತ್ ಆಚರಣೆಯಲ್ಲಿ ಯೇಸು ಮಾಡಿದ ಆಯ್ಕೆಗಳಿಗಿಂತ, ಆತನ ಆಕ್ಷೇಪಣೆಗಳು, ಧಾರ್ಮಿಕ ನಾಯಕರ ಸ್ಥಾಪನೆಗೆ ಹೆಚ್ಚು ಬೆದರಿಕೆಯನ್ನೇನೂ ಒಡ್ಡಲಿಲ್ಲ. ಸಬ್ಬತ್ತನಲ್ಲಿ ಶಿಕ್ಷಣಕ್ಕೆ ಅವಕಾಶ ಮಾಡಿಕೊಡಲು ಅವಕಾಶ ಮಾಡಿಕೊಡುವ ವಿಷಯದಲ್ಲಿ ಸಭಾಮಂದಿರ ವಿಫಲವಾಗಿರಲಿಲ್ಲ ಟೊರಾ (ಯೆಹೂದಿ ಧರ್ಮಶಾಸ್ತ್ರ)ವನ್ನು ಸಭಾಮಂದಿರದಲ್ಲಿ ಓದಿ ಮತ್ತು ಅರ್ಥವಿವರಣೆ ಕೊಡುವುದರಲ್ಲಿಯೂ ಸಭಾಮಂದಿರ ವಿಫಲವಾಗಿರಲಿಲ್ಲ. ಶಾಸ್ತ್ರಿಗಳು ಮತ್ತು ಫರಿಸಾಯರು ಧರ್ಮಶಾಸ್ತ್ರದ ಶಬ್ದಾರ್ಥಗಳನ್ನು ಬಲ್ಲವರಾಗಿದ್ದರು. ಅದು ಏನೇ ಆಗಿರಲಿ, ಯೇಸು, ಆತನ ಹಿಂಬಾಲಕರುಗಳಿಗೆ ಸಬ್ಬತ್ ದಿನ ಕುರಿತ ಶಿಕ್ಷಣದಲ್ಲಿ ಆತ ಬಹಳ ಮುಂದೆ ಹೋಗಿದ್ದನು.

**ಮತ್ತಾಯ 12:1–13 ಮತ್ತು ಲೂಕ 13:10–17ನ್ನು ಓದಿಕೊಳ್ಳಿರಿ. ಈ ಘಟನೆಗಳ**

**ಮುಖಾಂತರವಾಗಿ, ಯೇಸು, ತನ್ನ ಕಾಲದ ಜನರಿಗೂ ಮತ್ತು ಇಂದು ನಮಗೂ ಬೋಧಿಸುವುದೇನು?**

______________________________

______________________________

ಯೇಸುಕ್ರಿಸ್ತ ಸಬ್ಬತ್ ದಿನದಂದು ಕಾಯಿಲೆ ವಾಸಿಮಾಡುವುದರ ಕುರಿತ ವಾದ-ವಿವಾದ ಪಾಪದ ಸ್ವರೂಪ, ಸಬ್ಬತ್ತಿನ ಆಚರಣೆಗಿರುವ ಕಾರಣ, ತಂದೆ ಮತ್ತು ಕ್ರಿಸ್ತನ ನಡುವಿರುವ ಸಂಬಂಧ ಮತ್ತು ಯೇಸುಕ್ರಿಸ್ತನ ಅಧಿಕಾರದ ಸ್ವರೂಪಿಗಳ ಕುರಿತು ಬಹಳ ಮುಖ್ಯವಾದ ಆಧ್ಯಾತ್ಮಿಕ ಚರ್ಚೆಗೆ ದಾರಿ ಮಾಡಿಕೊಟ್ಟಿತ್ತು.

ಸಬ್ಬತ್ತನ್ನು ಕುರಿತ ಯೇಸುಕ್ರಿಸ್ತನ ಮನೋವೃತ್ತಿಯನ್ನು ನಮ್ಮ ಈ ವಾರದ ಅಧ್ಯಯನದ ಸ್ಮರಣವಾಕ್ಯದಲ್ಲಿ ಬಹಳ ಚೆನ್ನಾಗಿ ಸಂಕ್ಷೇಪಿಸಲಾಗಿದೆ. "ಮತ್ತು ಆತನು ಸಬ್ಬತ್ ದಿನವು ಮನುಷ್ಯರಿಗೋಸ್ಕರ ಉಂಟಾಯಿತೇ ಹೊರತು ಮನುಷ್ಯರು ಸಬತ್ ದಿನಕ್ಕೋಸ್ಕರ ಉಂಟಾಗಲಿಲ್ಲ; ಹೀಗಿರಲಾಗಿ ಮನುಷ್ಯಕುಮಾರನು ಸಬ್ಬತ್ ದಿನಕ್ಕೂ ಒಡೆಯನಾಗಿದ್ದಾನೆ ಅಂದನು" (ಮಾರ್ಕ 2:27,28). ಸಬ್ಬತ್ತಿನ ಆಚರಣೆ ಯಾರಿಗೇ ಆಗಲಿ ಹೊರೆಯಾಗಬಾರದೆಂಬುದನ್ನು ಆತ ಒತ್ತಿ ಹೇಳಿದ್ದನು. ಸಬ್ಬತ್ತಿನ ದಿನವನ್ನು ಉಂಟುಮಾಡಿದಾತನ ಚಾರಿತ್ರ್ಯ (ಗುಣ-ನಡತೆ)ಯನ್ನು ಕುರಿತು ಜನರು ಕಲಿಯುವುದಕ್ಕೆ ಸದಾವಕಾಶ ಮಾಡಿಕೊಡಲೆಂದೇ ಸಬ್ಬತ್ತನ್ನು "ಸೃಷ್ಟಿ" ಮಾಡಲಾಯಿತು. ಮತ್ತು ಆ ಸೃಷ್ಟಿಯನ್ನು ಮೌಲ್ಯಮಾಪನ ಮಾಡುವ ಮೂಲಕ, ಅನುಭವದಿಂದ ಹೆಚ್ಚಿನ ಕಲಿಕೆ ಸಾಧ್ಯವಾಗಿತ್ತು.

ತನ್ನ ಅದ್ಭುತ ಕಾರ್ಯಗಳ ಮೂಲಕ, ಪ್ರಶ್ನೆಗಳು ಎದ್ದೇಳುವಂತೆ ಮಾಡುವ ಯೇಸು. ತನ್ನ ಶಿಷ್ಯರನ್ನೂ, ಯೆಹೂದಿ ನಾಯಕರನ್ನು ಮತ್ತು ಜನಸಮೂಹವನ್ನು ಆಳವಾಗಿ ಧರ್ಮಗ್ರಂಥ ಕುರಿತೂ, ಅವರ ನಂಬಿಕೆಯನ್ನು ಕುರಿತೂ ಮತ್ತು ತಮ್ಮ ದೇವರನ್ನು ಕುರಿತೂ ಚಿಂತನೆ ಮಾಡುವ ಹಾಗೆ ಮಾಡುತ್ತಾನೆ. ನಮ್ಮಲ್ಲಿ ಯಾರೊಬ್ಬರೂ ನಿಯಮಗಳು ಮತ್ತು ನಿಬಂಧನೆಗಳಲ್ಲಿ ಸಿಕ್ಕಿಹಾಕಿಕೊಳ್ಳುವುದು ತುಂಬಾ ಸುಲಭ. ಅದೇನೂ ಕೆಟ್ಟದ್ದಲ್ಲ, ಆದರೆ ಅದೇ ಅಂತ್ಯವಾಗದು, ಬಹುಶಃ ಅಂತ್ಯವಾಗುವುದಕ್ಕೆ ಒಂದು ದಾರಿಯಾಗಬಹುದು, ಆದರೆ ಆ ಅಂತ್ಯ ನಾವು

ಸೇವೆಮಾಡುತ್ತಿರುವ ದೇವರ ಚಾರಿತ್ರ್ಯ (ಗುಣ–ನಡೆ)ದ ಜ್ಞಾನವಾಗಿರಲಿ. ಹಾಗಾದರೆ, ಇದು ನಮಗಾಗಿ ಕ್ರಿಸ್ತನ ನೀತಿಯ ಯೋಗ್ಯತೆಗಳ ಮೇಲಿನ ನಂಬಿಕೆಯ ಆಧಾರದ ಮೇಲೆ ಆತನಿಗೆ ನಮ್ಮ ನಿಷ್ಠಾವಂತ ವಿಧೇಯತೆಗೆ ಕಾರಣವಾಗುತ್ತದೆ.

**ಸ್ವತಃ ನೀವು ಸಬ್ಬತ್ತನ್ನು ಹೇಗೆ ಆಚರಣೆಯಲ್ಲಿಟ್ಟುಕೊಂಡಿದ್ದೀರಿ? ಆ ದಿನವನ್ನು "ಅದನ್ನು ಮಾಡಬೇಡ" ಮತ್ತು "ಇದನ್ನು ಮಾಡಬೇಡ" ಎಂದು ಹೇಳುವ ಮೂಲಕ ದೇವರ ವಿಶ್ರಾಂತಿಯ ದಿನವನ್ನು ಆನಂದಿಸದೆ, ಆತನನ್ನು ಇನ್ನೂ ಉತ್ತಮವಾಗಿ ಅರಿಯದೆ ಇರುವಿರಾ? ಹಾಗಿದ್ದರೆ ಜೀವನದಲ್ಲಿ ಬದಲಾವಣೆ ಹೇಗೆ ತಂದುಕೊಳ್ಳುವಿರಿ? ದೇವರು ನಿಮಗಾಗಿ ಸಬ್ಬತ್ತಿನ ವಿಷಯದಲ್ಲಿ ಅಂದು ಕೊಂಡಿರುವುದನ್ನು ಹೇಗೆ ಅನುಭವಿಸುವಿರಿ?**

---

**ಗುರುವಾರ** **ಡಿಸೆಂಬರ್ 17**

## ಸಮುದಾಯಕ್ಕೆ ಸಮಯ

ಯೇಸುಸ್ವಾಮಿ, ತನ್ನ ಶಿಷ್ಯರಿಗೆ ವಾರವಾರ ಸಭಾಮಂದಿರಕ್ಕೆ ಹೋಗಿ ದೇವಾರಾಧನೆ ಮಾಡುವ ಅಭ್ಯಾಸಮಾಡಿಸಿದ್ದನು. ಆತನು ಪುನರುತ್ಥಾನಗೊಂಡು ಪರಲೋಕಕ್ಕೆ ಏರಿಹೋದ ನಂತರ, ಶಿಷ್ಯರು ಇದೇ ಮಾದರಿಯನ್ನು ಅನುಸರಿಸಿದ್ದರು. ಕ್ರಿಸ್ತನ ಇತರೇ ಹಿಂಬಾಲಕರೂ ಈ ಅಭ್ಯಾಸವನ್ನೇ ಮುಂದುವರಿಸಿದ್ದರು. ಪುನರುತ್ಥಾನಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನೂ ಕೇಳಲು ಅಪೋಸ್ತಲರುಗಳು ಸಭಾಮಂದಿರವನ್ನೇ ಸೂಕ್ತ ಸ್ಥಳವನ್ನಾಗಿಸಿಕೊಂಡಿದ್ದರು. ಸಮುದಾಯ, ಸಭಾಮಂದಿರದಲ್ಲಿ ಒಂದುಗೂಡಿ, ಕಲಿಯುವುದಕ್ಕೆ ಸಬ್ಬತ್ತು ಸುವರ್ಣ ಸದಾವಕಾಶಮಾಡಿಕೊಟ್ಟಿತ್ತು. ಯೇಸು, ಇಬ್ರಿಯರ ಮೆಸ್ಸೀಯನಾಗಿದ್ದನು. ಅವನನ್ನು ಕುರಿತು ಹಳೇ ಒಡಂಬಡಿಕೆಯಲ್ಲಿ ಬರೆಯಲ್ಪಟ್ಟಿದೆ. ಆತನ ಬರೋಣವನ್ನು ಮೊದಲೇ ತಿಳಿಸಿದೆ. ಪ್ರತಿ ಸಬ್ಬತ್ತು ಈ ವಿಷಯ ಕುರಿತು ಸಭಾಮಂದಿರಲ್ಲಿ ಓದಿ ತಿಳಿಸಲಾಗುತ್ತಿತ್ತು. ಶಿಷ್ಯರು, ವಿಶೇಷವಾಗಿ ಯೆಹೂದಿಗಳಿಗೆ ಮತ್ತು "ದೇವರ ಭಯ" ಇರುವವರಿಗೆ ಯೇಸುಕ್ರಿಸ್ತನನ್ನು ಕುರಿತು ಹೇಳುವುದಕ್ಕೆ ಸಭಾಮಂದಿರಕ್ಕಿಂತ ಉತ್ತಮವಾದ ಸ್ಥಳ ಮತ್ತೊಂದು ಇರಲಿಲ್ಲ (ಅ.ಕ. 13:16,26).

**ಈ ಕೆಳಗಿನ ವಾಕ್ಯಗಳನ್ನು ಗಮನಿಸಿ. ಸಾರ್ವಜನಿಕ ರಂಗಸ್ಥಳಗಳಲ್ಲಿ ಕ್ರಿಸ್ತನ ಹಿಂಬಾಲಕರು ಹೇಗೆ ಸಾಕ್ಷಿ ನುಡಿದರು ಎಂಬ ವಿಷಯದಲ್ಲಿ ಈ ಕೆಳಗಿನ ವಾಕ್ಯಗಳು ನಮಗೆ ತಿಳಿಸಿಕೊಡುವುದೇನು? ಈ ಕೆಳಗಿನ ವಾಕ್ಯಗಳನ್ನು ಓದುವಾಗ ಅವರು ಎಲ್ಲಿ ಮಾತನಾಡುತ್ತಿದ್ದರು, ಯಾರೊಂದಿಗೆ ಮಾತನಾಡುತ್ತಿದ್ದರು, ಏನು ಹೇಳುತ್ತಿದ್ದರು ಮತ್ತು ಅದರ ಫಲಿತಾಂಶಗಳೇನು? ಅ.ಕೃ. 13:14–45; 16:13–14; 17:1–5; 18:4**.

---

---

ಅಪೋಸ್ತಲರ ಸಾಕ್ಷಿ ವೈಯಕ್ತಿಕವೂ ಹೌದು, ಮತ್ತು ವೇದಾಧಾರಿತವೂ ಹೌದು. ಪೌಲನು– "ಇಸ್ರಾಯೇಲ್ ಜನರೇ ಮತ್ತು ಯೆಹೂದ್ಯ ಮತಾವಲಂಭಿಗಳೇ, ಕೇಳಿರಿ, ನಮ್ಮ ಇಸ್ರಾಯೇಲ್ ಜನರು ದೇವರು...." ಎಂದು ತನ್ನ ಮಾತನ್ನು ಆರಂಭಿಸುತ್ತಾನೆ. ನಂತರ ಅವರ ಇತಿಹಾಸವನ್ನು ಐಗುಪ್ತದಿಂದ ಪ್ರಾರಂಭಿಸಿ, ಅರಣ್ಯವಾಸ, ನ್ಯಾಯಸ್ಥಾಪಕರುಗಳ ಕಾಲ, ದಾವೀದನ ತನ್ನಕ್ಕೆ ಬಂದನಂತರ, ಯಾರಿಂದ ತನ್ನ ಸಂಪೂರ್ಣ ಬಾಳು ಪರಿವರ್ತನೆಗೊಂಡಿತೋ, ಆತನ ತನಕ ಸವಿಸ್ತಾರವಾಗಿ ವರ್ಣಿಸುತ್ತಾನೆ.

ಪೌಲ ಮತ್ತು ಇತರರು ಹೇಳುತ್ತಿದ್ದ ವೈಯಕ್ತಿಕ ಅನುಭವ ಮತ್ತು ವಾಕ್ಯದ ಅರ್ಥಗ್ರಹಿಕೆ, ಧರ್ಮಶಾಸ್ತ್ರದ ಸನ್ನಿವೇಶಕ್ಕೆ ಹೊಂದುವಂತಿದ್ದವು ಮತ್ತು ಅರ್ಥಪೂರ್ಣವಾಗಿದ್ದವು. ಅವರು ವಿಷಯದ ಮಂಡನೆ ಮಾಡುತ್ತಿದ್ದರು. ಅವುಗಳನ್ನು ಕುರಿತ ಮುಕ್ತ ಚರ್ಚೆ ನಡೆಯುತ್ತಿತ್ತು. ವಾದ–ವಿವಾದಗಳು ನಡೆಯುತ್ತಿದ್ದವು. ವೈಯಕ್ತಿಕ ಸಾಕ್ಷಿಗಳು ಮತ್ತು ಧರ್ಮಶಾಸ್ತ್ರ ಎರಡೂ ಸಂಯೋಜನೆಗೊಂಡು ಪ್ರಸಂಗ, ಬೋಧನೆ ಮತ್ತು ಚರ್ಚೆಗಳ ಮೂಲಕ ಜನರ ಮುಂದೆ ವಿಷಯ ಪ್ರಸ್ತಾಪಮಾಡಿದಾಗ, ಅದು ಬಹಳ ಬಲಪ್ರದವಾಗಿ ಕೆಲಸ ಮಾಡಿತ್ತು. ಇದರ ಫಲಿತಾಂಶವಾಗಿ ಇವರಿಗೆ ಯೆಹೂದಿ ಮತ್ತು ಅನ್ಯಜನಗಳ ಮೇಲೆ ಅವರಿಗೆ ಪ್ರಾಪ್ತವಾದ ಅಧಿಕಾರವನ್ನು ಕಂಡು, ಅಂದಿನ ಧಾರ್ಮಿಕ ನಾಯಕರುಗಳು ಅದರ ಮೇಲೆ ಅಸೂಯೆಗೊಂಡರೆಂದು, ಸತ್ಯವೇದ ಆ ಭಾಗಗಳು ಹೇಳುತ್ತವೆ.

ಪ್ರಸಂಗ, ಬೋಧನೆ/ ಹಂಚಿಕೊಳ್ಳುವಿಕೆಯ ಮೂಲಕ, ಸಾಕ್ಷಿ ಮತ್ತು ಧರ್ಮಶಾಸ್ತ್ರ ವಿವರಣೆ ಮಾಡುವಿಕೆಯನ್ನು ಉತ್ತೇಜನಗೊಳಿಸಿದ್ದರಿಂದ, ಇಂದು, ಸೆವೆಂತ್–ಡೇ ಅಡ್ವೆಂಟಿಸ್ಟ್ ಸಭೆಗೆ ಬಲವಾದ ಇತಿಹಾಸವಿದೆ. ಸಬ್ಬತ್ ಶಾಲೆ, ಸಭೆಯ ಆರಾಧನೆಯೊಂದಿಗೆ ಒಡನಾಡಿ (ಯುವ ಕೂಟ ಇತ್ಯಾದಿ) ಸಂಯೋಜನೆಗೊಂಡು, ಸೆವೆಂತ್–ಡೇ ಅಡ್ವೆಂಟಿಸ್ಟ್ ಆರಾಧನೆಗೆ ಬಲವಾದ ಸಾಂಪ್ರದಾಯಿಕ ಶಿಕ್ಷಣದ ಅಡಿಪಾಯ ಹಾಕಿಕೊಟ್ಟಿದೆ. ಇತರೇ ಕಲಿಕೆಯ ಅನುಭವಗಳ ಪ್ರಕ್ರಿಯೆ ಪೂರ್ಣವಾಗಬೇಕಾದರೆ ಸಬ್ಬತ್ತಿನ ಶೈಕ್ಷಣಿಕ ಅನುಭವದ ಅವಶ್ಯಕತೆಯೂ ಇದೆ.

**ಶುಕ್ರವಾರ** **ಡಿಸೆಂಬರ್ 18**

**ಹೆಚ್ಚಿನ ಚಿಂತನೆ :** ವೈಟಮ್ಮನವರ, ದಿ ಡಿಸೈರ್ ಆಫ್ ದಿ ಏಜಸ್ ಪುಸ್ತಕದ, "ದಿ ಸಬ್ಬತ್" ಅಧ್ಯಾಯವನ್ನು, ಪುಟ 281–289ರವರೆಗೆ ಓದಿಕೊಳ್ಳಿರಿ.

ಯೆಹೂದಿಗಳಿಗೆ ಬದ್ಧವಾಗಿರುವ ಬೇರೆ ಯಾವುದೇ ಸಂಸ್ಥೆಯೂ ಸಬ್ಬತ್ತಿನಂತೆ, ಸುತ್ತಮುತ್ತಲಿನ ರಾಷ್ಟ್ರಗಳಿಂದ ಪ್ರತ್ಯೇಕಿಸಲು ಸಂಪೂರ್ಣವಾಗಿ ಒಲವು ತೋರಿಲ್ಲ. ಸಬ್ಬತ್ತಿನ ಆಚರಣೆ ಅವರನ್ನು ಆತನ ಆರಾಧಕರೆಂದು ಸೂಚಿಸಬೇಕೆಂಬುದೇ ದೇವರ ಉದ್ದೇಶವಾಗಿತ್ತು. ಸಬ್ಬತ್, ಅವರು ವಿಗ್ರಹಾರಾಧನೆಯಿಂದ ಪ್ರತ್ಯೇಕಗೊಂಡದ್ದಕ್ಕೆ ಮತ್ತು ಸತ್ಯವಾದ ದೇವರೊಂದಿಗೆ ಸಂಬಂಧ ಇಟ್ಟುಕೊಂಡಿರುವುದಕ್ಕೆ ಗುರುತಾಗಿದೆ. ಸಬ್ಬತ್ ಅನ್ನು ಪರಿಶುದ್ಧವಾಗಿಡಬೇಕಾದರೆ ಮೊದಲು ಮನುಷ್ಯರು ಪರಿಶುದ್ಧರಾಗಿರಬೇಕು. ನಂಬಿಕೆಯ ಮೂಲಕ ಅವರು ಕ್ರಿಸ್ತನ ನೀತಿಯಲ್ಲಿ ಪಾಲುಗಾರರಾಗಬೇಕು. ಇಸ್ರಾಯೇಲ್ಯರಿಗೆ– "**ಸಬ್ಬತ್ ದಿನವನ್ನು ದೇವರ ದಿನವೆಂದು ಆಚರಣೆಗೆ ತರುವುದಕ್ಕೆ ಜ್ಞಾಪಕದಲ್ಲಿಟ್ಟುಕೊಳ್ಳಬೇಕು**" "**ನೀವು ನನಗೆ ಪರಿಶುದ್ಧಜನರಾಗಿರಬೇಕು**" ವಿ.ಕಾ 28:8; 22:31. ಸಬ್ಬತ್ತು ಮಾತ್ರವೇ ಇಸ್ರಾಯೇಲ್ಯರನ್ನು ದೇವರ ಆರಾಧನೆ ಮಾಡುವವರೆಂದು ಅನ್ಯರಿಂದ ಬೇರ್ಪಡಿಸುತ್ತದೆ. ವೈಟಮ್ಮನವರ, ದಿ ಡಿಸೈರ್ ಆಫ್ ಏಜಸ್ ಎಂಬ ಪುಸ್ತಕದ ಪುಟ 283.

"ಆದ್ದರಿಂದ, ಸಬ್ಬತ್ತು, ನಮ್ಮನ್ನು ಪರಿಶುದ್ಧರಾಗಿಸುವ ಕ್ರಿಸ್ತನ ಬಲದ ಗುರುತು.... ಆತನ ಪರಿಶುದ್ಧಗೊಳಿಸುವಿಕೆಯ ಶಕ್ತಿಯ ಗುರುತಾಗಿ, ಕ್ರಿಸ್ತನ ಮುಖಾಂತರ

ಇಸ್ರಾಯೇಲ್ಯರ ದೇವರಲ್ಲಿ ಪಾಲುಗಾರರಾದವರಿಗೆಲ್ಲ ಸಬ್ಬತ್ತು ಕೊಡಲ್ಪಟ್ಟಿದೆ" – ದಿ ಡಿಸೈರ್ ಆಫ್ ಏಜಸ್, ಪುಟಗಳು 288, 289.

## ಚರ್ಚಿಸಬೇಕಾದ ಪ್ರಶ್ನೆಗಳು

1. ಬಹಳಷ್ಟು ಸಲ ಸೆವೆಂತ್ ಡೇ ಅಡ್ವೆಂಟಿಸ್ಟ್ ಕ್ರೈಸ್ತರು ಸಬ್ಬತ್ ದಿನದಂದು ಏನನ್ನು ಮಾಡಬಾರದೋ ಅದರಲ್ಲೇ ಹೆಚ್ಚು ಸಮಯ ಕಳೆಯುತ್ತಾರೆ. ಸಬ್ಬತ್ ದಿನ ಶೈಕ್ಷಣಿಕ ಅನುಭವ ಪಡೆಯುವ ದಿನವಾಗಿಸಲು, ಕೆಲವೊಂದು ಪ್ರಶ್ನೆಗಳನ್ನು ಚರ್ಚೆಗಾಗಿ ಸಿದ್ಧಮಾಡಿಟ್ಟುಕೊಳ್ಳಿರಿ. ಅರ್ಥಪೂರ್ಣ ಚರ್ಚೆಯಲ್ಲಿ ಕಾಲಕಳೆಯಿರಿ. ಉದಾ: "ದೇವರ ಚಾರಿತ್ರ್ಯ (ಗುಣ–ನಡೆ) ವನ್ನು ಕುರಿತು ಹೆಚ್ಚಾಗಿ ಕಲಿಯಲು ಸಬ್ಬತ್ ದಿನದಂದು ನಾನೇನು ಮಾಡಬಹುದು?"

2. ಮೇಲೆ ತಿಳಿಸಲಾದ ವೈಟಮ್ಮನವರ ಹೇಳಿಕೆಯನ್ನು ಪರಿಗಣಿಸಿರಿ. ಸಬ್ಬತ್ ಅನ್ನು ಸಾಂಪ್ರದಾಯಿಕವಾಗಿ ಆಚರಣೆ ಮಾಡುವುದನ್ನು ಕಂಡು ಸಮುದಾಯ ನಮ್ಮನ್ನು ವಿಶಿಷ್ಟ ಜನಾಂಗ ಎಂದು ಕರೆಯುವುದಿಲ್ಲ. "ಕ್ರಿಸ್ತನ ನೀತಿಯಲ್ಲಿ ಪಾಲುಗಾರರು" ಮತ್ತು "ಪವಿತ್ರರಾಗಿಸಲ್ಪಟ್ಟವರು" ಹೇಗಿರುತ್ತಾರೆ? ಸಬ್ಬತ್ತಿಗೂ ಮತ್ತು ಇವರಿಗೂ ಇರುವ ಸಂಬಂಧವೇನು?

3. ನಿಮ್ಮ ಸಬ್ಬತ್ತಿನ ಅನುಭವವನ್ನು ನೀವು ಯಾವ ರೀತಿಯಲ್ಲಿ ಸಂಪದ್ಭರಿತವಾಗಿಸಬಹುದು? ಮುಂದಿನ 12 ತಿಂಗಳುಗಳಲ್ಲಿ ಸಬ್ಬತ್ತಿನ ಆಚರಣೆಯ ಮೂಲಕ ನೀವು ಕಲಿಯಬಹುದಾದ ವಿಷಯಕ್ಕೆ ಸಂಬಂಧಪಟ್ಟಂತೆ ಮೂರು ಗುರಿಗಳನ್ನು ಗುರುತಿಸಿರಿ.